ಅಂತಹ ಸ್ಥಿತಿಯಲ್ಲಿರುವ ಯಾವ ತಾಯಿಗಾದರೂ ಆಗುವ ಆತಂಕ ಕಮಲಮ್ಮನಿಗೂ ಆಯ್ತು. ಪಾಲಿಸಬೇಕಾದ ಕೆಲವು ಸಂಗತಿಗಳನ್ನು ಮಗಳಿಗೆ ಹೇಳಿಕೊಟ್ಟಳು. ತಿನಿಸಬೇಕಾದ ಪೌಷ್ಟಿಕ ತಿಂಡಿಯನ್ನು ತನ್ನ ಸೀಮಿತ ಪರಿಧಿಯಲ್ಲಿ ಮಾಡಿಕೊಟ್ಟಳು. ಈ ಸಂಗತಿಯನ್ನು ಮಾಲಕಿಗೆ ತಿಳಿಸದೇ ಇರಲಾಗಲಿಲ್ಲ. ಅವತ್ತು ಸಾಯಂಕಾಲ ಶಾಣಪ್ಪ ಮನೆಗೆ ಬಂದ. ಅವನಿಗೆ ಹೆಂಡತಿ ಉಳಿದ ಸಂಗತಿಗಳೊಡನೆ ಇದನ್ನೂ ಹೇಳಿದ್ದಳು. ಅಲ್ಲಿ ನಿಂತುಕೊಂಡಿದ್ದ ಮದನಾಂಬಾಳ ಮುಗುಳಾಗುತ್ತಿರುವ ಮೈಮೇಲೆಲ್ಲ ಹೊಸದೆಂಬಂತೆ ಕಣ್ಣು ಹರಿಸಿದ. ಅವಳಿಗೆ ತೀವ್ರ ಮುಜುಗರವಾಗಿ ತನಗಿದೆಲ್ಲ ಯಾಕಾಯ್ತೊ ಅಂತ ತಲೆಕೆಳಗೆ ಹಾಕಿದಳು.

'ಚಂದನಿಕಾ, ಸಾಹೇಬ್ರು ನಿನ್ಹತ್ರ ಮಾತಾಡಬೇಕಂತೆ...' ತಾಯಿಯ ಸ್ವರದಿಂದ ಎಚ್ಚೆತ್ತವಳು ಎದ್ದು ಬಟ್ಟೆ, ಮುಖ ಸರಿಪಡಿಸಿಕೊಳ್ಳಲು ಬಚ್ಚಲತ್ತ ಹೊರಟಳು.

9

ಅವಳು ಬಂದಾಗ ಹೊರಕೋಣೆಯಲ್ಲಿ ನಾಯ್ಡು ಏನೋ ಗಾಢವಾಗಿ ಯೋಚಿಸುತ್ತ ಕುಳಿತಿದ್ದ. ಕಥೆಯಲ್ಲಿ ಒಂದು ಆಕರ್ಷಕ ತಿರುವು ಅಳವಡಿಸುವ ಆಕಾಂಕ್ಷೆ ಅವನಿಗೆ ಬಂದಿತ್ತು. ಅದಕ್ಕಾಗಿ ಆನಂದನನ್ನೂ ಅಲ್ಲಿಗೆ ಬರಲು ಸಾಧ್ಯವಾ ಅಂತ ವಿನಂತಿಸಿಕೊಂಡಿದ್ದ. ಆನಂದ ಬಂದವ ಮತ್ತೊಂದು ಕುರ್ಚಿಯ ಮೇಲೆ ಕುಳಿತ. ಎದುರು ಚಂದನಿಕಾ, ಅವಳಮ್ಮ ನಿಂತುಕೊಂಡರು. 'ನೀವೆಲ್ಲ ದೂಡಿ ಹಾಕಿದ್ರು ನಾವು ಇಲ್ಲೇ ಇರತೀವಿ ಅನ್ನೊ ಹಾಗಾಗಿದೆ ನೋಡಿ ಆನಂದ್! ಬರುವಾಗ ಏನೋ ಅಂದುಕೊಂಡು ಬಂದೆ. ಆದ್ರೆ ನೋಡಿ... ಜನ ಇದೇ ಬೇಕು ಅಂತಿದಾರೆ. ಅದಕ್ಕೆ ಸರಿಯಾಗಿ ಹೊಸದು ಇಲ್ಲಿ ಸಿಗತಾನೇ ಇದೆ' ಪೀಠಿಕೆ ಹಾಕಿದ ಆನಂದನೆದುರು. 'ಆನಂದ್, ನದಿದಂಡೆ ಮತ್ತದಕ್ಕೆ ತಾಗಿ ಆಧುನಿಕತೆ ಮರೆಮಾಚುವಂತಾ ಜಾಗವಿದ್ದರೆ ತೋರಿಸ್ತೀರಾ? ಇದು ನನ್ನ ರಿಕ್ವೆಸ್ಟ್.' ನಾಯ್ಡು ಮಾತಿಗೆ ಆನಂದ ಯೋಚನೆಗೆ ಬಿದ್ದ. ಚಂದನಿಕಾಳ ಮುಖ ನೋಡಿದ. ಅವಳೇನೋ ಅರ್ಥ ಮಾಡಿಕೊಂಡಳು. 'ಅಲ್ಲಿ ನದಿಪಾತ್ರ ತಗ್ಗಿನಲ್ಲಿದೆ. ಆ ಕಡೆ ಗದ್ದೆ, ಈ ಕಡೆ ಕರಡ ತುಂಬಿದ ಜಾಗ' ಅಭಿಪ್ರಾಯ ಹೇಳಿದಳು. 'ಎಲ್ಲಿ?' ಅಂತ ನಾಯ್ಡು ಕೇಳಿದ್ದಕ್ಕೆ ಇಬ್ಬರೂ ಉತ್ತರಿಸಲಿಲ್ಲ.

'ಹಾಗಲ್ಲ. ಒಂದೆರಡು ಅಂತಾ ಜಾಗವಿರೋ ಹಾಗಿದೆ. ಅದರ ಬಗ್ಗೆ ಪೂರ್ತಿ ಯೋಚಿಸಿ ನಾಳೆ ತಿಳಿಸ್ತೇನೆ' ಹೇಳಿದ ಆನಂದ.

ಬೆಳಗ್ಗೆ ಶುರುವಾದ ಶೂಟಿಂಗ್ ಮಧ್ಯಾಹ್ನದವರೆಗೂ ನಡೆಯಿತು. ಬಿಡುವಿನಲ್ಲಿ ಆನಂದ ತಾನು ಆಲೋಚಿಸಿದ ಜಾಗೆಯ ಬಗ್ಗೆ ಹೇಳಿದ. ಮೂರು ಗಂಟೆ ನಂತರ ಹೋಗೋಣ ಅಂತ ನಿಶ್ಚಯವಾಯಿತು. ಆದರೆ ತುರ್ತಾಗಿ ಬೆಂಗಳೂರಿಂದ ಬಂದ ಒಬ್ಬರನ್ನು ನೋಡಲು ನಾಯ್ಡುಗೆ ಶಿರಸಿಗೆ ಹೋಗಬೇಕಾಗಿ ಬಂತು. ತಯಾರಾಗಿ ಬಂದ ಆನಂದನಿಗೆ ಚಂದನಿಕಾ ವಿಷಯ ತಿಳಿಸಿದಳು. ಅವಳಾಗೆ 'ನಾಯ್ಡು ಜೊತೆ ತಪ್ಪಿತು ಸರಿ, ನಾವು ಹೋಗಿ ಬರೋಣ. ಹೇಗೂ ನೀವು ಹೊರಡೋ ತಯಾರೀಲಿ ಬಂದಿದೀರ...' ಅಂದಳು. ಮಾತಿನಲ್ಲಿಯ ಆಸೆಯನ್ನು ಗುರುತಿಸಿದವನಿಗೆ ಮತ್ತೇನು ಹೇಳಲಾಗಲಿಲ್ಲ. ಮತ್ತದೆ ಮಾರುತಿ ಓಮ್ನಿ ತೆಗೆದ. ಊರೊಳಗಿಂದಲೇ ಹೋಗುವ ಅವಶ್ಯಕತೆಯಿರಲಿಲ್ಲ. ಸೊರಬ ದಾರಿಯಲ್ಲಿ ಹೋಗಿ ಒಂದು ಜಾಗದಲ್ಲಿ ರಸ್ತೆಯಂಚಿನಲ್ಲಿ ಮರದ ನೆರಳಲ್ಲಿ ನಿಲ್ಲಿಸಿದ. ಕಾರು ಇಳಿದು ಎಡಗಡೆ ಕಾಲುದಾರಿಯಲ್ಲಿ ನಡೆಯುತ್ತ ಹೋದರು. ಬಲಗಡೆಯಲ್ಲಿ ನದಿ ಎದುರಿಗೆ ಹರಿದು ಬರುವುದು ಗೋಚರಿಸತೊಡಗಿತು. 'ಪಶ್ಚಿಮದಿಂದ ಹರಿದು ಬಂದ ನದಿ ಇಲ್ಲಿ ತಿರುಗಿಕೊಂಡು ಉತ್ತರಾಭಿಮುಖವಾಗಿ ಸಾಗುತ್ತಿದೆ. ಸುಮಾರು ಮುಕ್ಕಾಲು ಕಿಲೋಮೀಟರು ಹರಿದು ಮತ್ತೆ ಪೂರ್ವದತ್ತ ಹೊರಳಿಕೊಳ್ಳುತ್ತದೆ' ಅಂತ ಎಡಕ್ಕೆ ಕೈತೋರಿಸಿದ. ನದಿ ದಂಡೆಯಲ್ಲೊಂದು ಹಳೆಯದಾದ ಮಾವಿನ ಮರವಿತ್ತು. ಅದರಡಿಗೆ ಹೋದವರಿಗೆ ಬಲಕ್ಕೆ ನೀರಿಗಿಳಿಯುವ ಮೆಟ್ಟಿಲು ಕಾಣಿಸಿತು. ಬೆಳಗಿಂದ ಎಡಕ್ಕೆ ಬಲಕ್ಕೆಲ್ಲ ಸ್ನಾನ ಮಾಡುವವರು, ಬಟ್ಟೆ ತೊಳೆಯುವವರ ಚಟುವಟಿಕೆಯಿರುತ್ತಿತ್ತು. ಉಂಡು ವಿಶ್ರಾಂತಿ ಪಡೆಯುವ ಈ ಸಮಯದಲ್ಲಿ ನಿರ್ಜನವಾಗಿ, ಅಲ್ಲೆಲ್ಲ ಶಾಂತಿಯಾವರಿಸಿತ್ತು. ನದಿಯ ಹರಿವು ಪ್ರಶಾಂತವಾಗಿ ಎಡಕ್ಕೆ ಸಾಗಿ ಹೋಗುತ್ತಿತ್ತು. ಮೆಟ್ಟಿಲ ಪಕ್ಕ ಅರ್ಧ ಮುಳುಗಿದ ಬಂಡೆಗಳೆರಡು ತಪಸ್ಸು ಮಾಡುತ್ತಿದ್ದವು. ದಂಡೆಯಿಂದ ಸ್ವಲ್ಪವೆ ದೂರದಲ್ಲಿ ನದಿಗೆ ಮುಖ ಮಾಡಿದ ಚಿಕ್ಕ ಕಲ್ಲಿನ ಗುಡಿ ಕಂಡಿತು. ಒಬ್ಬಿಬ್ಬರು ಮಾತ್ರ ಕುಳಿತು ಪೂಜೆ ಮಾಡುವಷ್ಟು ಮಾಡು ತಗ್ಗಾಗಿತ್ತು. 'ಅದು ಕರ್ಮದೇವರು. ಅಪರಕರ್ಮವನ್ನು ಇಲ್ಲಿ ದೇವರೆದುರು ಮಾಡುತಾರೆ' ವಿವರಿಸಿದ ಆನಂದ. 'ಇಲ್ಲಿಯ ಕ್ಷೇತ್ರದೇವತೆ ಶಿವ ಅಲ್ವ? ಈ ಗುಡಿಯಂತೆ ಅದೂ ಪೂರ್ವಕ್ಕೆ ಮುಖ ಮಾಡಿದೆಯ?' ಕೇಳಿದಳು.

'ಹೌದು. ಸೂರ್ಯ ಎಲ್ಲಾ ಶಕ್ತಿಗಳ ಮೂಲ. ಅಂದರೆ, ಆಹಾರ ವಸ್ತುಗಳಾದ ಕಾಳುಬೇಳೆ ಸೊಪ್ಪು ಹುಲ್ಲು ಏನೇ ಬೆಳೆಯಲು ಸೂರ್ಯ ಬೇಕೇಬೇಕು. ಸಸ್ಯ ತಿನ್ನೋ ಪ್ರಾಣಿಗಳಿದ್ದರೆ ಮಾಂಸಾಹಾರಿಗಳಿಗೆ ಆಹಾರ. ನಾವು ಉರಿಸೊ ಕಟ್ಟಿಗೆ, ಕಲ್ಲಿದ್ದಲು ಎಲ್ಲ ಸೂರ್ಯನ ಶಕ್ತಿಯನ್ನವಲಂಬಿಸಿ ಉತ್ಪತ್ತಿಯಾದವೇ. ಹೀಗಾಗಿ ಜೀವಾಧಾರ ಸೂರ್ಯ ಅನ್ನುವುದು ಭೌತಿಕ ಸತ್ಯ. ವೈಜ್ಞಾನಿಕವಾಗಿಯೇ ಒಪ್ಪಿಕೊಂಡಿದ್ದು. ನೀರು ದ್ರವವಾಗಿರಲು, ಗಾಳಿ ಅತ್ತಿಂದಿತ್ತ ಹರಿಯಲು, ಮಳೆ ಬೀಳಲು ಸಹ ಸೂರ್ಯನ ಉಷ್ಣ ಕಾರಣ. ಹೀಗಾಗಿ ಅವನುದಯಿಸುವ ದಿಕ್ಕು ನಮಗೆ ಪವಿತ್ರ. ನಾವು ಕಟ್ಟುವ ಮನೆಯನ್ನು ಪೂರ್ವಕ್ಕೆ ಮುಖ ಮಾಡತೇವೆ, ದೇವಾಲಯಗಳೂ ಹೊರತಲ್ಲ.'

'ಅಂದರೆ ಸೂರ್ಯ ಶಿವನಿಗಿಂತ ಮೇಲೆ ಅಂತಾನ?'

'...ನಮ್ಮೆದುರು ಗೋಚರಿಸೊ ಈ ಎಲ್ಲ ಭೌತಿಕ ವಸ್ತು ಶಕ್ತಿಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿತು ವಿಜ್ಞಾನ. ಅಂತ್ಯ ಗೋಚರಿಸದ ದಾರಿಯ ಅವಸ್ಥೆಯನ್ನು ಮುಟ್ಟದಾಗೆಲ್ಲ, ಇದನ್ನೆಲ್ಲ ನಿಯಂತ್ರಿಸುವ ಒಂದು ಅಗೋಚರ ಶಕ್ತಿಯಿದೆ ಅನ್ನುವ ಕಾಣ್ಕೆಯಾಗುತ್ತದೆ ಮನಸಿಗೆ. ಐನ್‌ಸ್ಟೀನ್ ಸಹ ಇದನ್ನ ಹೇಳಿದಾನೆ.'

'ಅಂದ್ರೆ ಆ ಶಕ್ತಿಯನ್ನ ಬೇಡಿಕೊಂಡ್ರೆ ಈ ಭೌತಿಕ ಶಕ್ತಿಗಳನ್ನ ನಮಗನುಕೂಲವಾಗಿ ಬದಲಿಸುತ್ತೆ ಅಂತಾನ?'

'ಇಲ್ಲ, ಆದರೆ ಈ ಭೌತಿಕ ಶಕ್ತಿಗಳಿಗೆ ಹೊಂದಿಕೊಂಡು ಜೀವಿಸೊ ಮನಸ್ಥೈರ್ಯ, ಮಾರ್ಗದರ್ಶನ ಸಿಗುತದೆ. ಶಿವನ ಲಿಂಗರೂಪವನ್ನ ಮನುಷ್ಯ ಪೂಜಿಸಿದ. ಜೀವಿಗಳು ಅವತರಿಸಿ ಈ ಭೂಮಿಗೆ ಬರುವ ಪವಾಡದ ಮೂಲವಾಗಿ. ಬೆಳೆದು ಬಾಳಿ, ಕೊನೆಗೆ ಇಲ್ಲಿಂದಲೇ ಇಲ್ಲವಾಗುವ ನಿಗೂಢವನ್ನು ಒಪ್ಪಿ, ಆ ಖಾಲಿತನವನ್ನು ಅರಗಿಸಿಕೊಳ್ಳುವುದು ಶಿವನೆದುರೆ. ಇದೆಲ್ಲ ಸಹಜ ಅಂದುಕೊಳ್ಳುತ್ತ ಬದುಕಿದಷ್ಟು ಕಾಲ ಈ ಭೌತಿಕ ಜಗತ್ತನ್ನು ಜೀವಸಂಕುಲವನ್ನು ಪ್ರೀತಿಸುತ್ತ, ಬದುಕನ್ನು ಸಹ್ಯವಾಗಿಸೊ ಅಂತಃಶಕ್ತಿ ಈ ಶಿವ, ವಿಷ್ಣು ಎಲ್ಲ.' ಅವಳು ಹೊಳೆಯಂಚಿನ ಮರವನ್ನು ನೋಡುತ್ತ 'ಇದಕ್ಕೇನೊ ಹೇಳಿದ್ರಿ ಆಗ...' ಅಂದಳು. 'ಅದಾ? ಇದಕ್ಕೂ ಮೊದಲು ಇಲ್ಲೊಂದು ಎತ್ತರದ ಮಾವಿನಮರವಿತ್ತು ಅಂತ ನೆನಪು. ಬಾವಾಜಿ ಮಾವು ಅಂತ ಹೆಸರಿತ್ತು. ಬಾಬಾಜಿಗಳು ಬೇಡಿ ತಂದ ಅಕ್ಕಿಯಿಂದ ಇಲ್ಲಿ ಕಲ್ಲುಗಳ ಒಲೆ ಹೂಡಿ ಅನ್ನ ಬೇಯಿಸಿಕೊಳ್ಳತಿದ್ದರು. ಉಂಡು, ಸಂಜೆಗತ್ತಲಲ್ಲಿ ಭಂಗಿ ಸೇದುತ್ತಾ ಏನೇನೊ ಹಾಡಿಕೊಳ್ಳತಿದ್ದರು. ಮರದಡಿ ನಿದ್ರಿಸಿ ಯಾವಾಗಲೊ ಮುಂದೆ ಹೋಗಿರತಿದ್ರು.' ಅಂದವ ಒಂದು ಕ್ಷಣ ಅಂತರ್ಮುಖಿಯಾದ. ಆಮೇಲೆ '... ನೋಡು, ಶಿವನನ್ನು ಭಸ್ಮ ಬಳಿದುಕೊಂಡು, ಚರ್ಮ



ಚಿತ್ರ: ವಿಜಯ

## ಸಂಸಾರ

ಭಾನುವಿಗೆ ಶಶಿಯ ಕೂಡೆ
ಎಷ್ಟೊಂದು ಅನ್ಯೋನ್ಯತೆ
ಪ್ರೀತಿ ಒಲವು
ಹಗಲಷ್ಟು ದುಡಿದರೂ
ಇರುಳು ಹರಿಸುತ
ತೊಡಿಸುವನು ಕಿರಣದೊಡವೆ!

■ ವಿ. ಸುಬ್ರಹ್ಮಣ್ಯ ಭಟ್